Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 217] ಮಂಗಳವಾರ 10–8–48 [ಬಿಡಿ ಪ್ರತಿ 3 ಪೈ

61 ನಿಜಾಂ ಗ್ರಾಮಗಳು ಸ್ವತಂತ್ರವಾದುವು

ನಾವು ಇಚ್ಚೆಪಟ್ಟರೆ ಹೈದರಾಬಾದ್ ಸಂಸ್ಥಾನವನ್ನು 4–5 ದಿವಸಗಳಲ್ಲಿ ಕೊಂದುಬಿಡುವೆವು ಎಂದು ಬೊಂಬಾಯಿನ ಪ್ರಧಾನಿ ಶ್ರೀ ಬಿ. ಜಿ. ಖೇರ್‌ರವರು ಗದಗ್‌ನಲ್ಲಿ ಗರ್ಜಿಸಿದ್ದಾರೆ.

ಮೈಸೂರು ಸಂಸ್ಥಾನದ ಕಾಂಗ್ರೆಸ್ ಅಖಿಲ ಭಾರತ ಕಾಂಗ್ರೆಸ್‌ನಲ್ಲಿ ಐಕ್ಯವಾಗಬೇಕೆಂದು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯಿಸಿದೆ.

ಗಾಂಧೀಜೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಶಕ್ತಿಯುತವಾದ ಸಂಸ್ಥೆಗಳು ಕಾಣಿಕೆ ಕೊಡುವ ಬಗ್ಗೆ ಭಾರತ ಡೊಮಿನಿಯನ್ ಪಾರ್ಲಿಮೆಂಟ್‌ನಲ್ಲಿ ವಾಣಿಜ್ಯ ಸಚಿವ ಶ್ರೀ ಕೆ. ಸಿ. ನಿಯೋಗಿಯವರಿಂದ ಒಂದು ಮಸೂದಾ ಕಾನೂನು ಮಂಡಿಸಲ್ಪಟ್ಟಿದೆ.

ಅಖಿಲ ಭಾರತ ರೇಡಿಯೋ ಪ್ರಸಾರವನ್ನು ಕುರಿತು ಹೈದರಾಬಾದ್ ಪ್ರಧಾನಿ ಶ್ರೀ ಎಮ್ ಲಾಯಕ್ ಅಲಿಯವರು "ಹಿಟ್ಲರ್ ನಾಜಿಗಳಂತೆ ಭಾರತ ಸರ್ಕಾರದ ಪ್ರಚಾರ ಮಾಡುತ್ತಿದ್ದಾರೆಂದು' ಕಟು ಟೀಕೆಮಾಡಿದ್ದಾರೆ

ಹೈದರಾಬಾದ್ ತ್ರಿವ್ಯಗಾವಿಗಳು ಪ್ರಾಮುಖ್ಯವಾಗಿ ಇತ್ತೆಹಾದ್–ಉಲ್–ಮುಸ್ಲಿಮೀನ್ ಬೆಂಬಲ ಪಡೆದ ಮಂತ್ರಿಮಂಡಲವೇ ನಿಜಾಂ-ಭಾರತ ಒಪ್ಪಂದಕ್ಕೆ ಕಂಟಕಪ್ರಾಯವಾದದ್ದು ಎಂದು ಸರ್ ಎಮರ್ಜ ಹೇಳಿಕೆಯಿತ್ತಿರುವರು.

ಹೈದರಾಬಾದ್ ಸಂಸ್ಥಾನದ ಉಪ ಪ್ರಧಾನಿ ಶ್ರೀ ಪಿಂಗಳಿ ವೆಂಕಟರಾಮರೆಡ್ಡಿಯವರು ಮೈಸೂರು ಸಂಸ್ಥಾನದ ಗೃಹ ಮಂತ್ರಿ ಶ್ರೀ ಟಿ. ಮರಿಯಪ್ಪನವರನ್ನು ಭೇಟಿ ಮಾಡಿ ಸಂಭಾಷಿಸಿದರೆಂದು ವರದಿ.

ಲೋಕಪಾವನಿ ನದಿಯ ತಾತ್ಕಾಲಿಕ ಸೇತುವೆ ರಪೇರಿಯಾಗಿದೆ. ಎಥಾ ಪ್ರಕಾರ ಬೆಂಗಳೂರು ಮೈಸೂರು ರೈಲು ಸಂಚಾರ ಮಾಡುವುದು ಎಂದು ಸರ್ಕಾರದ ಪಿ. ಓ ರವರ ಪತ್ರಿಕಾ ಪ್ರಕಟಣೆ ತಿಳಿಸುತ್ತದೆ

ಕೃಷ್ಣರಾಜನಗರದ ಸುತ್ತಮುತ್ತ ಕೆಲವು ಗ್ರಾಮಗಳಲ್ಲಿ ಪ್ಲೇಗ್ ಉಪದ್ರವದ ಪ್ರಯುಕ್ತ ಇದೇ ತಾ|| 12 ರಲ್ಲಿ ಕೃಷ್ಣರಾಜನಗರದಲ್ಲಿ ಪ್ರಭುಗಳಿಂದ ಪ್ರಾರಂಭಿಸಲ್ಪಡಬೇಕಿದ್ದ ಆರೋಗ್ಯ ಕೇಂದ್ರದ ಆರಂಭೋತ್ಸವ ಮುಂದುವರಿದಿದೆ ಎಂದು ತಿಳಿದುಬಂದಿದೆ

University of Mysore

Office of the University of Mysore, Mysore,
Dated 5 th August 1948.

NOTIFICATION

The following University Examinations will commence from **MONDAY THE 18 th OCTOBER 1948.** The detailed Time-tables will be published in the Gazette in due course.

i) Intermediate in Arts.
ii) Intermediate in Science.
iii) Intermediate in Commerce.
iv) B. A.,
v) B.Sc.,
vi) B. A. Hons. Preliminary
vii) B.Sc. Hons Preliminary
viii) B. Com.
ix) Engineering
x) L M P

By Order
D. S. Gordon
Registrar
University of Mysore
Mysore

ವಾರದ ಭವಿಷ್ಯ

ಜ್ಯೋತಿಷ್ಯರಿಂದ

— ಆರೋಗ್ಯವುಂಟು. ...ರ್ಯಾದೆಗಳು ಲಭಿಸುವುವು. ...ೋಪಕಾರ ಕಾರ್ಯಗಳಲ್ಲಿ ಆಸ ವ್ಯವಹಾರದಲ್ಲಿ ಮೇಲು ಕೈ.

ವೃಷಭ — ಆರೋಗ್ಯವುಂಟು. ಮ ...ೋಚಿಂತೆಯುಂಟು. ಖರ್ಚು ಹೆಚ್ಚು.

ಮಿಥುನ — ಶತೃ ನಿರ್ಮೂಲದ ...ಡೆ ಲಕ್ಷ್ಯವಿರಲಿ. ಆನಾರೋಗ್ಯ ಭ ...ಯ. ಸ್ವಲ್ಪ ಕಷ್ಟ ಕಾಲ.

ಕರ್ಕಾಟಕ — ಆರೋಗ್ಯ ಆನಂದ ಗಳುಂಟು. ವ್ಯವಹಾರದಲ್ಲಿ ಜಯ.

ಸಿಂಹ — ಆರೋಗ್ಯವುಂಟು. ಧ ನಲಾಭವುಂಟು. ವ್ಯವಹಾರದಲ್ಲಿ ಯಶ.

ಕನ್ನ — ಕರ್ತವ್ಯಪರಾಯಣರಾಗಿ ದ್ದಲ್ಲಿ ಶುಭ. ಮನಸ್ಸನ್ನು ಶಾಂತವಾಗಿಟ್ಟುಕೊಳ್ಳಿ.

ತುಲಾ — ದುಷ್ಟರ ವಿಷಯದಲ್ಲಿ ಜಾಗರೂಕತೆಯುಳ್ಳವರಾಗಿ. ಖರ್ಚು ಹೆಚ್ಚು.

ವೃಶ್ಚಿಕ — ಆರೋಗ್ಯವುಂಟು. ಮನೋಶಾಂತತೆಯುಂಟು. ಕಾರ್ಯಸಿದ್ಧಿಯಾಗುವುದು. ಚಿತ್ತವು ಪ್ರಸನ್ನವಾಗುವ ಕಾರ್ಯಗಳು ನಡೆಯುವುವು.

ಧನಸ್ಸು — ಆರೋಗ್ಯವಿರುತ್ತದಾ ...ಚಿತ್ತವು ಅಲ್ಲೋಲಕಲ್ಲೋಲವಾ ...ತ್ತದೆ. ಜರ್ಚು ಹೆಚ್ಚು.

ಮಕರ — ವ್ಯವಹಾರದಲ್ಲಿ ಪ್ರತಿ ...ಲಗಳು ಕಂಡುಬಂದರೂ ಜಯವುಂ ...ಾಗುವುದು. ಆರೋಗ್ಯವುಂಟು.

ಕುಂಭ — ವೈರಿಗಳ ವಿಷಯದಲ್ಲಿ ...ಂದು ಕಣ್ಣು ಇಟ್ಟಿರಬೇಕು. ಆರೋ ...ೃದಲ್ಲಿ ಜಾಗ್ರತೆ ಅವಶ್ಯಕ.

ಮೀನ — ಚಿಂತೆಗಳಿಗೆ ಅವಕಾಶ ...ವುದಾಗಲಿ ಮನಸ್ಸನ್ನು ಸ್ವಾಧೀನ ...ಟ್ಟುಕೊಂಡಿದಲ್ಲಿ ಯಾವ ಭಯವೂ ...ರುವುದಿಲ್ಲ.

Opera

7–8–48 ರಿಂದ

ISWAS

ಮೆಹತಾಬ್, ಬೇಬಿ ...ಧುರಿ ಪಾತ್ರವಹಿಸಿರುವ

ವಿಶ್ವಾಸ್

(ಅಮೋಘ ಹಿಂದಿ ಚಿತ್ರ)

.... ಪ್ರತಿದಿನ 3 ಆಟಗಳು ....

ಇಂದಿನ ವರ್ತಮ...

ಷೋಲಾಪುರ, ಆ 9—ಷೋ... ಪುರ ಜಿಲ್ಲೆ ಗಡಿಯ ನಿಜಾಂ ಪ್ರ... 61 ಹಳ್ಳಿಗಳು ಒಂದು ಗುಂಪು ಸ್ವ... ವನ್ನು ಘೋಷಿಸಿದವು ಎಂದು ಸಂಸ... ದೊಳಗಿರುವ ವಾಂಗಿ ಎಂಬಲ್ಲಿಂದ ಸು... ಬಂದಿದೆ.

ವಾಂಗಿಯಲ್ಲಿ ಈ ಗ್ರಾಮವಾಸಿಗಳ... ಸಮ್ಮೇಳನ ಸೇರಿ ಭಾರತ ಧ್ವಜಾರೋ... ಣ ಮಾಡಿ ಸ್ವಾತಂತ್ರ್ಯವನ್ನು ಘೋಷಿಸಿದರು.

ಹೈದರಾಬಾದ್ ರಜಾಕಾರರ ಪುಂಡಾಟದ ಪರಮಾವಧಿ ಶ್ರೀ ಭನ್ವಾಲಿಯವರನ್ನು ಪುನಃ ಉಪವಾಸ ವ್ರತ ಕೈಗೊಳ್ಳುವಂತೆ ಪ್ರೇರೇಪಿಸಿದೆ.

ಗಾಂಜಿನೇನಿ ಮತ್ತು ಎಲ್ಲಾಪುರಬಳಿ ಆರ್. ಎಂ. ಎಸ್. ವ್ಯಾಕ್ ಮತ್ತು ಮೊದಲನೆ ಮತ್ತು ಎರಡನೆ ಗಾಡಿಗಳು ಸಶಸ್ತ್ರ ಗುಂಪೊಂದರಿಂದ ಅಗ್ನಿಗೆ ಆಹುತಿಯಾದವು.

ಹೈದರಾಬಾದ್ ಭೀಕರ ಸಮಸ್ಯೆ ಪರಿಹಾರಕ್ಕೆ ಸಂಗ್ರಾಮವೇ ಸಿದ್ಧ ಎಂದು ದೆಹಲಿಯಲ್ಲಿ ಹಲ... ಖರು ಅಭಿಪ್ರಾಯವಿದೆ.

ಸರ್ ಮಿರ್ಜಾ ಇಸ್ಮೈಲ್‌ರವರು ...ನು ದಿವಸ ಬೆಂಗಳೂರಿಗೆ ಆಗಮಿಸಿ...

ಪ್ರಧಾನಿ ಅಟ್ಲಿಯವರು, ಭಾರತ ಸರಕಾರದೊಡನೆ ಒಪ್ಪಂದಕ್ಕೆ ಬರಬೇಕೆಂದು ನಿಜಾಂರಿಗೆ ಪತ್ರ ಬರೆದಿರುವುದಾಗಿ ಲಂಡನ್ 'ರೆನಾಲ್ಡ್ಸ ನ್ಯೂಸ್' ಪ್ರಕಟಿಸಿದೆ. ಆದರೆ ನಿಜಾಂರಿಗೆ ಕಾಗದ ತಲುಪಿದೆಯೇ ಎಂಬ ಬಗ್ಗೆ ಅಧಿಕಾರಿಗಳಿಗೆ ಅನುಮಾನವಿದೆ.

ವುಡ್‌ಲ್ಯಾಂಡ್ಸ್

6–8–48 ರಿಂದ

ಲಲಿತ ಪವಾರ್, ನಾಯಂಪಳ್ಳಿ ಡೇವಿಡ್, ಸತ್ಯಪಾಲ್ ನಟಿಸಿರುವ

ಜನತ Janata

ಮೈಸೂರು ಸಂಸ್ಥಾನದಲ್ಲೆ ಪ್ರಥಮ ಪ್ರದರ್ಶನ – ಅತ್ಯಮೋಘ ಹಿಂದಿ ಚಿತ್ರ

ಪ್ರತಿದಿನ 3 ಆಟಗಳು

— ಬೇಗನೆ ಪ್ರದರ್ಶಿಸಲ್ಪಡುತ್ತದೆ —

ಅತ್ಯಂತ ಜನಪ್ರಿಯ ಚಿತ್ರ

We Two

ನಾವು ಇಬರು

ಬ

ಶಾ॥ 9-8-48 ॥ಶ್ರೀ॥ ನಂ. 100

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಮೂರ್ಖತನವೇ ಅನರ್ಥಕ್ಕೆ ಹೇತು

[ತ್ರೀ ಕರಪಾತ್ರಿಸ್ವಾಮಿಗಳವರು]

[ಮುಂದುವರಿದುದು]

ಕೆಲವರು, ಒಂದಿಷ್ಟು ಮಾಡಲೂ ಬೇಕು, ಕೇವಲ ಭಗವಂತನ ಭಜನೆಯಿಂದಲೇ ಕೆಲಸ ಸಾಗದೆಂದು ಹೇಳುತ್ತಾರೆ. ಹೀಗೆಯೇ 'ಲೋಕಮಾನ್ಯ ...ಕರು' ತಮ್ಮ ಗೀತಾ ರಹಸ್ಯದಲ್ಲಿ ...ನ್ನು ಪರಿಹಾಸ ಗಯ್ದಿರುವರು— ಒಂದು ವೇಳೆ ಭಗವಂತನು ಅರ್ಜುನನಿಗೆ ಧರ್ಮಗಳನ್ನು ಬಿಟ್ಟು ನನ್ನ ಸ್ಮರಣೆ ಮಾಡೆಂದೇ ಹೇಳಿದ್ದರೆ, ಅದೇ ವೇಳೆ ಅರ್ಜುನನು ಎಲ್ಲ ಕರ್ಮವನ್ನು ತ್ಯಜಿಸಿ ಸಂನ್ಯಾಸ ತೆಗೆದುಕೊಂಡು, ಕೇಸರೀ ಬಟ್ಟೆಗಳನ್ನುಟ್ಟು, ದಂಡ—ಭಿಕ್ಷಾ ಪಾತ್ರೆಗಳನ್ನು ಹಿಡಿದು 'ನಾರಾಯಣ ನಾರಾಯಣ' ಎನ್ನುತ್ತಾ ತಿರುಗುತ್ತಿದ್ದನು ಹಾಗೂ ಯುದ್ಧವನ್ನು ಮಾಡುತ್ತಿರಲಿಲ್ಲ. 'ಸರ್ವ ಧರ್ಮಾನ್ಪರಿತ್ಯಜ್ಯ' ಎಂಬುದರಲ್ಲಿ ಭಕ್ತಿಯ ಉಪದೇಶವೇ ಇದ್ದ ಪಕ್ಷದಲ್ಲಿ ಕಾಲುಗಳಿಗೆ ಗೆಜ್ಜೆ ಕಟ್ಟಿಕೊಂಡು, ಕಯ್ಯಲ್ಲಿ ಕರತಾಳವನ್ನು ಹಿಡಿದುಕೊಂಡು ಭಾರತದ ಅರ್ಜುನನು ಯುದ್ಧದಲ್ಲಿ ಒಂದುಸಾರಿ ಪುನಃ ಬೃಹನ್ನಳೆಯಂತಹ ನೃತ್ಯವನ್ನು ತೋರಿಸುತ್ತಿದ್ದನು" ಎಂದು. 'ಸರ್ವಧರ್ಮಾನ್ಪರಿತ್ಯಜ್ಯ' ಎಂಬುದರ ಅರ್ಥ ಎಲ್ಲ ಧರ್ಮಗಳನ್ನು ಬಿಟ್ಟು ಬಿಟ್ಟು ನನ್ನ ಸ್ಮರಣೆ ಮಾಡೆಂದಲ್ಲ. ಇದರರ್ಥವೇನೆಂದರೆ—ನನ್ನ ಸ್ಮರಣೆ ಮಾಡು; ಆದರೆ ಕಾರ್ಯ ಮಾಡು ಧಾರ್ಮಿಕ ಕಾರ್ಯವನ್ನು ಮಾಡು ಅಂದರೆ ವ್ಯಾಪಕಕಾರ್ಯ ಮಾಡು ಸರ್ವ ಪ್ರಕಾರದ ಕಾರ್ಯಗಳಲ್ಲಿ ನನ್ನ ಸ್ಮರಣೆ ಇಟ್ಟುಕೋ. ಇಂತಹ ಅರ್ಥವನ್ನು ಮನ್ನಿಸುವುದರಲ್ಲಿ ಅನುಪಪತ್ತಿಯೇನೂ ಇಲ್ಲ ಆದರೆ ಇಲ್ಲಿ ಮತ್ತೂ ಜನರು ಏನು ಹೇಳುತ್ತಾರೆಂಬುದನ್ನು ನೋಡಬೇಕಾಗಿದೆ. ಒಬ್ಬನ ಮನೆಗೆ ಬೆಂಕಿ ತಗಲಿದ್ದರೆ, ಅವನು ಆ ಸಮಯದಲ್ಲಿ ಕುಳಿತುಕೊಂಡು ಜಪಸರವನ್ನು ತಿರುಗಿಸಹತ್ತಿದರೆ ಇಲ್ಲದೆ ಆ ಸಮಯದಲ್ಲಿ ದುರ್ಗಾಪಾಠಕ್ಕೆ ಕುಳಿತರೆ ನಿಜವಾಗಿ ನಗೆಗೇಡಿನ ವಿಷಯವಾಗುವುದು. ಆದರೆ ಇದರಲ್ಲಿಯೂ ಅ ಎರಡು ಸ್ಥಿತಿಗಳಿವೆ— ಒಂದು ಸ್ಥಿತಿಯೇನೆಂದರೆ ಬೇರೇನೂ ಮಾಡಲು ಶಕ್ಯವಿಲ್ಲ, ಬೇರಾವ ಬಲವೂ ಇಲ್ಲ, ಒಂದುವೇಳೆ ಬಲವಿದ್ದಲ್ಲಿ ಬೇರೇನಾದರೂ ಮಾಡಲು ಶಕ್ಯವಿದ್ದಲ್ಲಿ, ಅದನ್ನೂ ಮಾಡುತ್ತಿದ್ದೆವು, ಆದರೆ ವಿವಶರಾಗಿ ಬೇರಾವ ಉಪಾಯವೂ ಇಲ್ಲದಿರುವಾಗ ಭಗವಂತನನ್ನೇ ಏಕೆ ಕರೆಯಬಾರದು.

ಎರಡನೆಯ ಸ್ಥಿತಿಯೇನೆಂದರೆ— ಸಂಪೂರ್ಣ ವಿಶ್ವಾಸದಿಂದ ನಾವು ಎಲ್ಲ ಉಪಾಯಗಳನ್ನೂ ತ್ಯಜಿಸಿ ಭಗವಂತನನ್ನು ಕರೆಯುತ್ತೇವೆ, ಆದರೆ ಹೀಗೆ ಪ್ರತಿಯೊಬ್ಬನಿಂದ ಆಗಲಾರದು. ಮನೆ ಮನೆಯಲ್ಲಿ ಕಿಚ್ಚು ಬಿದ್ದಾಗ ನಾವು ದೇವಾಲಯದಲ್ಲಿ ಕುಳಿತು ಜಪ ಮಾಡುವೆವೆಂಬುದು ಎಲ್ಲರಿಂದಲೂ ಆಗದು. ಇದಕ್ಕೆ ಅವಿಚಲ ವಿಶ್ವಾಸದ ಅವಶ್ಯಕತೆಯಿದೆ. ಪುರುಷೋತ್ತಮ, ಪರಬ್ರಹ್ಮ, ಸರ್ವಾಂತರಾತ್ಮನಾದ ಭಗವಂತನಲ್ಲಿ ಪೂರ್ಣ ವಿಶ್ವಾಸವುಳ್ಳವನು ಮಾತ್ರ ಹೀಗೆ ಮಾಡಬಲ್ಲನು, ಭಗವಂತನು ಅತನಿಗೆ ಅವಶ್ಯವಾಗಿ ಸಹಾಯ ಮಾಡುವನು. ಆದರೆ ಸಾಧಾರಣ ಸ್ಥಿತಿಯವರಿಗಾದರೋ 'ಮಾಮನುಸ್ಮರ ಯುಧ್ಯ ಚ' ಎಂಬುದರ ಮಾರ್ಗವೇ ಸರ್ವೋತ್ತಮವಾಗಿ ತಿಳಿದುಬರುತ್ತದೆ. ಇಂದು ನಮ್ಮಲ್ಲಿ ದುರ್ಬಲತನ, ಹೇಡಿತನ, ದುರ್ಮತಿಗಳು ನಿವಾಸ ಮಾಡಿಕೊಳ್ಳುತ್ತಿವೆ, ಭಗವಂತನ ಸ್ಮರಣೆಯಿಂದ ಇವೆಲ್ಲವೂ ದೂರವಾಗುವುವು, ನಮ್ಮಲ್ಲಿ ಸದ್ಬುದ್ಧಿ ಬರುವುದು, ಬಲವು ಸಂಚರಿಸುವುದು, ಆವೇಲೆ ನಾವು ಯುದ್ಧದಲ್ಲಿಯೂ ವಿಜಯಿಗಳಾಗಿ ಅಂತಿಮಫಲವನ್ನು ಪಡೆಯುವೆವು.

ಧರ್ಮಾದಾಯದ ವ್ಯವಸ್ಥೆ

ಧರ್ಮಾದಾಯದ ಮತ್ತು ಬೇರೆ ಸಾರ್ವಜನಿಕ ನಿಧಿಗಳ ವ್ಯವಸ್ಥೆಯನ್ನು ಸಂಮಾಡುವ ಉಪಾಯಗಳ ಮೇಲೆ ವಿಚಾರ ಮಾಡುವುದಕ್ಕಾಗಿ ಬೊಂಬಾಯಿ ಸರಕಾರವು ಜಸ್ಟಿಸ್ ತಂಡುಲಕರರ ಅಧ್ಯಕ್ಷತೆಯಲ್ಲೊಂದು ಕಮಿಟಿಯನ್ನು ನೇಮಿಸಿದೆ.

ಈ ಕಮಿಟಿ ಎದುರಿಗೆ ಬಂದ ಸಾಕ್ಷ್ಯಗಳಲ್ಲಿ ಹೇಳಲಾಗಿದೆ— "ಡಾಕೋರದ ದೇವಸ್ಥಾನದಲ್ಲಿ ದಿನಾ ಹತ್ತು ಸಾರಿ ನೈವೇದ್ಯವಾಗುತ್ತದೆ. ಅದರಲ್ಲಿ ಒಂದೊಂದು ಪದಾರ್ಥವನ್ನೂ ನೂರಾರು ಹರಿವಾಣಗಳಲ್ಲಿಡುತ್ತಾರೆ. ಎಷ್ಟೋ ದೇವಸ್ಥಾನಗಳಲ್ಲಿ ದೇವರಿಗೆ ಕೇಸರಿಯಿಂದ ಸ್ನಾನ ಮಾಡಿಸುತ್ತಾರೆ, ಅದಕ್ಕಾಗಿ ಎಷ್ಟೋ ತೊಲ ಕೇಸರಿ ದಿನಾ ಖರ್ಚಾಗುತ್ತದೆ. ಕೆಲವು ದೇವಾಲಯಗಳಲ್ಲಿ ಮಣಗಟ್ಟಲೆ ಹಾಲನ್ನು ಹೊಯ್ಯುತ್ತಾರೆ. ಎಷ್ಟೋಕಡೆ ತುಪ್ಪದ 2–2ಸೇರಿನ ದೀಪ ಉರಿಸುತ್ತಾರೆ. ಇದಲ್ಲದೆ ಸಾಧುಗಳಿಗೆ ಊಟ, ಇರುವೆಗಳಿಗೆ ಸಕ್ಕೆ, ಸರ್ಪಗಳಿಗೆ ಹಾಲು, ಗೋವಿಗೆ ಹುಲ್ಲು, ಆವೆ.–ವಿಾನುಗಳಿಗೆ ತಿಂಡಿ, ಹೀಗೇ ಎಷ್ಟೋ ತರಹದ ದಾನ ಪತ್ರಗಳಿವೆ. ಇದು ಸಾರ್ವಜನಿಕವಾದ ಹಣದ ಅಪವ್ಯಯ ಮಾತ್ರವಲ್ಲ, ದುರುಪಯೋಗವೇ ಸರಿ ಅದನ್ನು ನಿಲ್ಲಿಸಿ ಜನತೆಗೆ ಹಿತವಾಗುವಂತೆ ಅದನ್ನು ಸದುಪಯೋಗ ಮಾಡಬೇಕು."

ಮೇಲ್ಕಂಡ ಸಮಿತಿಯ ಕೊನೆಯ ವಿಾಟಿಂಗಿನಲ್ಲಿ ನ್ಯಾಯಮೂರ್ತಿ ಬಾಬಾ ಸಾಹೇಬ ಶ್ರೀ ಮುಕುಂದರಾವ ಜಯಕರರು ಇಂತಹ ತರ್ಕಗಳಿಗೆ ಯೋಗ್ಯವಾದ ಉತ್ತರವಿತ್ತರು. ಇವರು ತಮ್ಮ ಹೇಳಿಕೆಯಲ್ಲಿ ತಿಳಿಸಿದರು— 'ಇಂತಹ ವಿಷಯಗಳಲ್ಲಿ ಕಾನೂನು–ಕಾಯದೆಗಳ ತಡೆಯು ನನಗಿಷ್ಟವಿಲ್ಲ. ಈಗಿನ ಅಸೆಂಬ್ಲಿ ಕೌನ್ಸಿಲ್ಲುಗಳ ಮೇಲೆ ಈ ವಿಷಯದಲ್ಲಿ ವಿಶ್ವಾಸವಿಡಲಾಗುವುದಿಲ್ಲ. ಸಂಸ್ಕೃತಿ ಮತ್ತು ಪರಂಪರೆಯ ಯೋಜನೆ ಮತ್ತು ಸಂವರ್ಧನೆಯ ಪ್ರಶ್ನೆಯನ್ನು ಅವುಗಳ ಮೇಲೆ ಬಿಡುವುದು ಅನುಚಿತವು. ಬಹುಮತದಿಂದ ಸಾರ್ವಜನಿಕ ಭಾವನೆಯು ಪ್ರಕಟವಾಗುವುದಿಲ್ಲಿ. ನಾವು ಸರಕಾರ ಅಥವಾ ಕೆಲವು ವ್ಯಕ್ತಿಗಳ ಸಮಿತಿಯ ನಿರ್ಣಯವನ್ನು ವಿರೋಧಿಸುವೆವು. ದಾನ ಕೊಟ್ಟವನ ಧ್ಯೇಯಕ್ಕೆ ವಿಪರೀತವಾಗುವಂತೆ ದಾನದ ವಿನಿಯೋಗ ಮಾಡುವುದು ಸರಿ ಸಾರ್ವಜನಿಕ ಹಿತದೃಷ್ಟಿ ಧರ್ಮದ ಮರ್ಯಾದೆಯ... ತಿಯು ವಿಚಾರಿಸುವುದಿಲ್ಲ ಜನಿಕ ದಾನದ ವಿನಿಯೋಗ ಇಚ್ಛಾನುಸಾರವಾಗಿಯೇ ಯಾವುದಾದರೂ ಕಾರಣದಿಂದ ಪಾಲಿಸುವ ಸಂಭವವಿಲ್ಲವಾದರೆ, ಹುದೇ ರೀತಿಯು ಉದ್ದೇಶಕ್ಕಾಗಿ ನ್ನು ವಿನಿಯೋಗಿಸಬಹುದು: "

ಸಮಿತಿಯು 'ನೀವು ತುಪ್ಪದ ನ್ನೂರು ದೀಪ ಉರಿಸುವುದನ್ನು ಒಪ್ಪುತ್ತೀರಾ?' ಎಂದವರನ್ನು ಪ್ರಶ್ನಿಸಲು ಜಯಕರರೆಂದರು— 'ನಿಸ್ಸಂದೇಹ ದಾನಕೊಟ್ಟವರು ಇದಕ್ಕಾಗಿ ಹಾ ವ್ಯವಸ್ಥೆ ಮಾಡಿದ್ದರೆ ಅದನ್ನು ಮಾಡಬೇಕು ಧರ್ಮಾದಾಯದ ಉಳಿತಾಯಕ್ಕಾಗಿ ದೀಪವುರಿಸುವುದನ್ನು ನಿಲ್ಲಿಸಲು ಸಾಧ್ಯವಿಲ್ಲ ಪ್ರಾಚೀನ ಪರಂಪರೆಯನ್ನು ರಕ್ಷಿಸಲೇಬೇಕು. ವಾದ ರೂಪವಾದ ಉದಾಹರಣೆಗ ಅದನ್ನು ಅನುಚಿತವೆಂದು ಸಿದ್ಧಗೆ ಬಾರದು. '

'ಸಾರ್ವಜನಿಕಹಿತ' ವೆಂಬ ದಲ್ಲಿ ಜಯಕರರೆಂದರು— 'ಸ ಹಿತದ ಪರಿಭಾಷೆ ಏನು ? ದ ನಿರ್ಣಯ ಮಾಡಲು ಅ ನ್ಸಿಲುಗಳಿಗೆ ಅಧಿಕಾರ ಒಪ್ಪಿ ತಯಾರಿಲ್ಲ. ಯಾವುದೇ ಶಾಂತಿ, ಸುವ್ಯವಸ್ಥೆ ಮತ್ತು ನೀತಿ ಹಾಗೂ ನಿಯಮಗಳ ಬ ಲೆ ಎಷ್ಟರವರೆಗೆ ನಡೆಯುತ್ತಿರು ಅಷ್ಟರವರೆಗೆ ವಿಶ್ವಸ್ತನಿಧಿ ನಿಯ ವ್ಯವಸ್ಥೆಯನ್ನು ಮಾಡಬಹುದು. ಯಾವುದಾದರೂ ನಿಧಿಯನ್ನು ದರೆ, ಅದರ ಮೇಲ್ವಿಚಾರಣೆಯ ಕಾರದಿಂದ ನಿಮುಕ್ತನಾದ ಕಮಿಷನರ್ ಮಾಡುತ್ತಿದ್ದ ವ್ಯವಸ್ಥೆಯು ನಿರ್ಣಯವು ಅಸೆಂ ನ್ಸಿಲ್ಲುಗಳ ಬಹುಮತಿಯಿ ದಾದರೆ, ನಿಧಿಯು ಉದ್ದೇ ಹೋಗುತ್ತದೆ.'

Save th
ಗೋ ವಧೆ

Edited, Printed and Pu
by M S Krishna Rao
Satyavadi Press, Ch
Agrahar, Mysore,